## ಚಿಟ್ಟೆಯ ಹೊಸ ಬಟ್ಟೆ!

ಎಲ್ಲಿ ತಗೊಂಡೆ ಹೇಳೇ ಚಿಟ್ಟೆ
ಈ ಹೊಸ ಬಟ್ಟೇನ?
ಸಂಜೀವ್ ಶೆಟ್ಟಿ ? ಥೌಸೆಂಡ್ ನೈಂಟಿ ?
ಅರರೆ ಅಷ್ಟೇನಾ?

ಓಹೋ ! ಇವತ್ತಾ ಹುಟ್ಟಿದ ಹಬ್ಬ
ಹೇಳ್ಲೇ ಇಲ್ವಲ್ಲೇ?
ಸ್ವೀಟೇನಿಲ್ವೇ? ಪಾರ್ಟಿ ಎಲ್ಲೇ
ನನ್ನನ್ನು ಕರೆಯಲ್ವೇ?

ಏನು? ಚಂದ್ರ ಬರ್‍ತಿದ್ದಾನಾ?
ಟಾಗೋರ್ ಪಾರ್ಕಲ್ಲಾ?
ಸಿಕ್ಸ್ ಥರ್ಟೀಗಾ? ಬಂದೇ ಬರುವೆ
ಖಂಡಿತ ಮರೆಯಲ್ಲ!



# ಮೋಸದ ಫಲ

■ ಬಸಪ್ಪ ಎಸ್. ಮುಳ್ಳೂರ್

ಒಂದು ಕಾಡಿನಲ್ಲಿ ನರಿ ಮತ್ತು ಮೊಲ ಬಹಳ ದಿನಗಳಿಂದ ಗೆಳೆಯರಾಗಿ ವಾಸಿಸುತ್ತಿದ್ದವು. ಒಂದು ದಿನ ಮೊಲ ಹತ್ತಿರ ಇದ್ದ ಹೊಲದಲ್ಲಿ ಭತ್ತದ ತೆನೆ ಕಿತ್ತು ತಂದು ಅಕ್ಕಿ ಮಾಡಿ ಅದರಿಂದ ಪಾಯಸ ಮಾಡೋಣ ಎಂಬ ಹೊಸ ಉಪಾಯವನ್ನು ಸೂಚಿಸಿತು. ಮೊಲವು ಅದರ ಮಾತಿನಂತೆ ನಡೆದುಕೊಂಡಿತು. ಸ್ವಲ್ಪ ಅಕ್ಕಿಯನ್ನು ಊರಿನ ಅಂಗಡಿಯಲ್ಲಿ ಮಾರಿ ಅದರಿಂದ ಬೆಲ್ಲವನ್ನು ಸಹ ಕೊಂಡು ತಂದಿತು. ಮೊಲ ಹಾಗೂ ನರಿ ಕೂಡಿಕೊಂಡು ಅಕ್ಕಿ ಬೆಲ್ಲ ಸೇರಿಸಿ ಪಾಯಸವನ್ನು ಮಾಡಿದವು. ಪಾಯಸ ಘಮ ಘಮ ಘಮ ಘಮ ಪರಿಮಳ ವಾಸನೆ ಕಾಡಿನಲ್ಲಿ ಹರಡಿತು. ಇಬ್ಬರು ಊಟಕ್ಕೆ ಕುಳಿತಾಗ ನರಿ ದೊಡ್ಡ ಬಾಳೆ ಎಲೆ ಹಾಕಿಕೊಂಡು ಹೆಚ್ಚು ಪಾಯಸ ತಿಂದು ಮುಗಿಸಿತು. ಮೊಲಕ್ಕೆ ಪಾಯಸ ಸಾಲಲಿಲ್ಲ. ಹಸಿವಿನಿಂದ ಕಂಗಾಲಾಗಿ ಬೇಸರದಿಂದ ಊರಿನ ಕಡೆಗೆ ಹೆಜ್ಜೆ ಹಾಕಿತು.

ಒಂದು ಮನೆಯ ಮುಂದೆ ಹೆಂಗಸೊಬ್ಬಳು ಗೋಧಿಹಿಟ್ಟು ಮಾಡುತ್ತಿದ್ದುದು ಕಾಣಿಸಿತು. ಆಕೆಯನ್ನು ನೋಡುತ್ತಾ ನಿಂತಿತ್ತು. ಆಗ ಹೆಣ್ಣುಮಗಳು ಕರುಣೆಯಿಂದ ಒಂದು ಹಿಡಿ ಗೋಧಿ ಹಿಟ್ಟು ಕೊಟ್ಟಳು. ಸಂತಸದಿಂದ ಅದನ್ನು ಕೈಯಲ್ಲಿ ಹಿಡಿದುಕೊಂಡು ಬರುವಾಗ ದಾರಿಯಲ್ಲಿ ಗಾಣಿಗನ ಮನೆ ಕಾಣಿಸಿತು. ಆ ಮನೆಗೆ ಹೋಗಿ ಎಣ್ಣೆ ಬೇಡಿ ಪಡೆದು ಗೋಧಿ ಹಿಟ್ಟಿನಲ್ಲಿ ಕಲಿಸಿ ಮುಂದೆ ಸಾಗುತ್ತಿದ್ದಾಗ ಅಂಗಡಿಯೊಂದು ಕಂಡಿತು. ಅಲ್ಲಿ ಬೆಲ್ಲ ಪಡೆದು ಹಿಟ್ಟು ಬೆಲ್ಲ ಎರಡನ್ನೂ ಬೆರೆಸಿ ಉಂಡೆ ಮಾಡಿಕೊಂಡು ಕಾಡಿಗೆ ಬಂದಿತು. ಹೊಟ್ಟೆ ತುಂಬಾ ಪಾಯಸ ತಿಂದ ನರಿ ಮರದ ಕೆಳಗೆ ಮಲಗಿ ಬಾಯಿತೆರೆದು ನಿದ್ರಿಸುತ್ತಿತ್ತು. ಮೊಲ ಅದೇ ಮರದ ಕೊಂಬೆ ಮೇಲೆ ಕುಳಿತು ಉಂಡೆ ತಿನ್ನಲು ಶುರು ಮಾಡಿತು. ಕೆಳಗೆ ಮಲಗಿದ ನರಿ ಬಾಯಲ್ಲಿ ಉಂಡೆ ಒಂದು ಚೂರು ಬಿದ್ದಿತು. ಆಗ ಅದಕ್ಕೆ ರುಚಿ ಹತ್ತಿ ಗಿಡದ ಮೇಲೆ ಕುಳಿತ ಮೊಲವನ್ನು ನೋಡಿ ನನಗೆ ಸ್ವಲ್ಪ ತಿನ್ನಲು ಕೊಡು ಎಂದು ಕೇಳಿತು. \

ಇಬ್ಬರು ಸಮವಾದ ದುಡಿಮೆ ಇದ್ದಾಗ ನೀನು ನನಗೆ ಸ್ವಲ್ಪ ಕೊಟ್ಟು ಮೋಸ ಮಾಡಿದೆ. ಈಗ ತಿನ್ನುತ್ತಿರುವುದು ನನ್ನೊಬ್ಬನ ದುಡಿಮೆಯ ಫಲ ಹಾಗಾಗಿ ನಾನೊಬ್ಬನೇ ತಿನ್ನುತ್ತಿದ್ದೇನೆ ಎಂದು ಹೇಳಿತು. ಇಷ್ಟು ರುಚಿಯಾದ ಉಂಡೆಯನ್ನು ಹೇಗೆ ಮಾಡಿಕೊಂಡು ಬಂದಿ ಎಂದು ನರಿ ಮೊಲವನ್ನು ಕೇಳಿತು. ಆಗ ಮೊಲ ಉಂಡೆ ಮಾಡಲು ಹೇಗೆ ಸಾಧ್ಯವಾಯಿತು ಎಂಬುದನ್ನು ವಿವರಿಸಿತು. ಹಾಗಾದರೆ ನಾನು ನಿನ್ನ ಹಾಗೆ ಮಾಡಿಕೊಂಡು ಬರುತ್ತೇನೆ ಎಂದು ಊರಿಗೆ ಊರ ಕಡೆ ಹೊರಟಿತು.

ಮೊಲ ಹೇಳಿದ ಮನೆ ಹುಡುಕುತ್ತ ಬಂತು. ಆ ಮನೆಯ ಮುಂದೆ ನಿಂತಿದ್ದ ಹೆಣ್ಣುಮಗಳು ನರಿಯನ್ನು ನೋಡಿ ಕೂಡಲೇ ಮೊನ್ನೆ ದಿನಾ ನನ್ನ ಕೋಳಿಯನ್ನು ಕದ್ದುಕೊಂಡು ಹೋಗಿದ್ದ ಕಪಟ ನರಿ ಇದೆ ಎಂದು ತಿಳಿದು ನರಿಯನ್ನು ದೊಣ್ಣೆಯಿಂದ ಚೆನ್ನಾಗಿ ಬಡಿದಳು. ನರಿಯು ಎದ್ದುಬಿದ್ದು ಅಲ್ಲಿಂದ ಓಡಿ ಹೋಯಿತು.

ನಂತರ ಗಾಣಿಗೇರ ಮನೆಗೆ ಬಂದಿತು. ನರಿಯನ್ನು ನೋಡಿದ ಗಾಣಿಗ ಇದು ಮೋಸ ಮಾಡಲು ಬಂದಿದೆ ಎಂದು ತಿಳಿದು ಕಾಸಿದ ಗಾಣದ ಎಣ್ಣೆಯನ್ನು ನರಿಯ ಮೇಲೆ ಸುರಿದ ನರಿಯ ಚರ್ಮ ಸುಟ್ಟುಹೋಯಿತು. ಬೆಲ್ಲವಾದರೂ ಸಿಕ್ಕೀತು ಎಂದು ಬೆಲ್ಲ ಮಾಡುವವನಿಗೆ ಹತ್ತಿರ ಹೋಯಿತು. ಮಾಡುವವನು ನರಿಯನ್ನು ನೋಡಿ ಮರೆಯಲ್ಲಿ ಒಲೆಯಿಂದ ಉರಿಯುವ ಸೌದೆಯನ್ನು ತೆಗೆದುಕೊಂಡು ನರಿಯ ಮುಖಕ್ಕೆ ಇಟ್ಟು ಸುಟ್ಟುಬಿಟ್ಟ. ಆಗ ತಾನು ಮೊಲಕ್ಕೆ ಮಾಡಿದ ಮೋಸದ ಫಲವಾಗಿ ನನಗೆ ಈ ರೀತಿ ಶಿಕ್ಷೆ ಬಂದಿತು ಎಂಬ ಅರಿವು ನರಿಗೆ ಬಂದಿತ್ತು. ಮತ್ತೊಬ್ಬರಿಗೆ ಮೋಸ ಮಾಡಲು ಹೋದರೆ ಅದು ನಮಗೆ ತಿರುಗುಬಾಣವಾಗುತ್ತದೆ.



ಚಿತ್ರ: ಭಾವು ಪತ್ತಾರ್